ಕೊರಡಿಗೆ ಕಳುಹಿಸಿಕೊಟ್ಟಳು. ದಿವಾಕರ್ ನಿಂತೇ ಇದ್ದ. ನೋವಿನಿಂದ ಅವನ ಮುಖ ಮುದುಡಿತ್ತು. ಆತಂಕದಿಂದ ಹಣೆಯ ಮೇಲೆ ಮೂಡಿದ ಬೆವರ ಹನಿಗಳನ್ನು ಕರ್ಚೀಫಿನಿಂದ ನಿಧಾನವಾಗಿ ಒರೆಸಿಕೊಂಡ.

"ನಿಮ್ಮ ಪತ್ನಿ ಇಷ್ಟು ದಿನಗಳು ಕಳೆದರೂ ಏನನ್ನೂ ಮನ ಬಿಚ್ಚಿ ಮಾತನಾಡಲು ತಯಾರಿಲ್ಲ... ನಂಗೇನೂ ಆಗಿಲ್ಲ... ಅಂತಾರೆ. ಒಮ್ಮೊಮ್ಮೆ ಯಾಕೋ ಹೆದರಿಕೆಯಾಗ್ತಾಯಿರುತ್ತೆ ಅಂತಾ ಇರ್‍ತಾರೆ... ಇಷ್ಟರಿಂದ ಏನನ್ನು ಪತ್ತೆ ಹಚ್ಚೋಕ್ಕಾಗೋಲ್ಲ... ನಿಮ್ಮನ್ನು ಕೇಳಬಹುದಲ್ಲಾ?..." ವಿಜಯಾ ಪೆನ್ನನ್ನು ಮುಚ್ಚಿ ಕೆಳಗಿಡುತ್ತಾ ಕೇಳಿದಳು.

"ನನ್ನ ಅಭ್ಯಂತರವೇನೂ ಇಲ್ಲ ಮೇಡಂ. ಪ್ರೊಫೆಸರ್ ಆಗಲೇ ಒಬ್ಬನನ್ನೇ ಕರೆದು ಕೇಳಿದ್ದಾರೆ"

ಅರ್ಧದಲ್ಲಿಯೇ ತಡೆದ ವಿಜಯಾ, "ನಾನು ನೀವು ಹೇಳಿದ ಹಿಸ್ಟರಿಯನ್ನು ಸಂಕ್ಷಿಪ್ತವಾಗಿ ಹೇಳ್ತೀನಿ... ತಪ್ಪಿದ್ದರೆ, ಮತ್ತೊಮ್ಮೆ ನೆನಪಿಸಿ... ಹೇಳ್ತೀರಾ..." ಎನ್ನುತ್ತಾ ಕೇಸ್‌ಷೀಟನ್ನು ಬಿಡಿಸಿದಳು.

ದಿವಾಕರ ಕುಳಿತುಕೊಂಡ. ಒಣಗಿದ ತುಟಿಗಳನ್ನು ನಾಲಿಗೆಯಿಂದ ಸವರಿಕೊಂಡ. ಮೈಯೆಲ್ಲಾ ಕಣ್ಣಾಗಿ ವಿಜಯಾಳತ್ತ ನೋಡುತ್ತಾ ಕಿವಿ ತೆರೆದು ಕುಳಿತ.

ವಿಜಯಾ ಒಮ್ಮೆ ಕನ್ನಡಕ ಸರಿಪಡಿಸಿಕೊಂಡು ಮಧ್ಯೆ ಓದುತ್ತಾ ಹೇಳತೊಡಗಿದಳು.

"ಗೀತಾ ನಿಮ್ಮ ಪ್ರೀತಿಯ ಪತ್ನಿ. ಅವಳಿಂದ ನಿಮಗೆ ಯಾವ ಕೊರತೆಯೂ ಆಗಿಲ್ಲ."

"ಊಹೂಂ... ಪರಿಪೂರ್ಣ ಹೆಣ್ಣೆಂದರೆ ಅವಳೇ... ಮದುವೆಯಾಗಿ ಆರು ವರ್ಷಗಳಾದರೂ ನಂಗೆ ಎಂದೂ ಬೇಸರ ತಂದವಳಲ್ಲ... ಪ್ರತಿ ದಿನ... ಪ್ರತಿ ಕ್ಷಣ ಹೊಸಬಳಂತೆ... ಆಸಕ್ತಿ ಕೆರಳಿಸುತ್ತಿದ್ದಳು..." ಅವನ ಧ್ವನಿಯಲ್ಲಿ ಅವನಿಗರಿಯದೇ ಉದ್ವೇಗ ತುಂಬಿತ್ತು.

ವಿಜಯಾ ನಕ್ಕಳು.

"ನೀವು ಬಹಳ ರೊಮ್ಯಾಂಟಿಕ್ ಇದ್ದೀರಿ..."

"ಅದಿಲ್ಲದಿದ್ದರೆ ಜೀವನ ಸಪ್ಪೆ ಅನ್ನಿಸೊಲ್ವಾ?"

"ಸರಿ... ನಿಮ್ಮದು ಆದರ್ಶ, ಅನುರೂಪ ದಾಂಪತ್ಯ. ಒಬ್ಬ ಪುಟ್ಟ ಮಗಳೂ ಇದ್ದಾಳೆ..."

"ಹೌದು..."

"ಎಂದಾದರೂ. ನೀವು ನಿಮಗರಿಯದೇ ಅವರಿಗೆ ಏನಾದರೂ ಷಾಕ್ ಆಗುವಂತಹ..."

"ಖಂಡಿತಾ ಇಲ್ಲ ಮೇಡಂ... ಎಲ್ಲಿ ಬೇಕಾದರೂ ನಿಂತು ಆಣೆ ಮಾಡಿ ಹೇಳ್ತೀನಿ... ಎಂದೂ ನಾನು ನನ್ನ ತಾಳ್ಮೆಯನ್ನು ಕಳೆದುಕೊಂಡದ್ದೇ ಇಲ್ಲ..." ಮಧ್ಯೆ ತಡೆದು ತಟ್ಟನೆ ಹೇಳಿದ.

"ಇತ್ತೀಚೆಗೆ ಅಂದರೆ ಒಂದೆರಡು ತಿಂಗಳುಗಳಿಂದ ಇದ್ದಕ್ಕಿದ್ದ ಹಾಗೆ ರಾತ್ರಿಯಲ್ಲಿ ದಿಢೀರನೆ ಎದ್ದು ಕುಳಿತು ಗಾಬರಿಯಿಂದ ನನ್ನನ್ನು ತಟ್ಟಿ ತಟ್ಟಿ ಎಬ್ಬಿಸುತ್ತಾಳೆ. 'ನೋಡ್ರೀ... ನನ್ನ ಮಗೂನಾ ನಾನು ನೀರಿನಲ್ಲಿ ಮುಳುಗಿಸಿ ಕೊಂದುಬಿಟ್ಟೆ... ಕ್ಷಮಿಸಿ...' ಎಂದು ಅಳಲು ಪ್ರಾರಂಭಿಸಿಬಿಡುತ್ತಾಳೆ... ನಾನು ಸಮಾಧಾನಪಡಿಸಿ, ದೀಪ ಹಾಕಿ, ಯಾವ ಆತಂಕವೂ ಇಲ್ಲದೇ ಮಲಗಿರುತ್ತಿದ್ದ ಪುಟ್ಟ ಸವಿತಾಳನ್ನು ತೋರಿಸಿದಾಗ ನಂಬದವಳಂತೆ ಎದ್ದುಹೋಗಿ ಮಗುವನ್ನು ಪುನಃ ಪುನಃ ಮುಟ್ಟಿ ಮುಟ್ಟಿ ನೋಡಿ ಎಷ್ಟೋ ಹೊತ್ತಿನ ನಂತರ ಬಂದು ಮಲಗುತ್ತಿದ್ದಳು..."

"ಇದು ಒಂದು ಸಾರೀನೋ ಎರಡು ಸಾರೀನೋ ಅಂತಾ ನಾನೂ ನಿರ್ಲಕ್ಷಿಸಿದ್ದೆ... ವಿನಾಕಾರಣ ಭಯಪಡ್ತಾಳೆ. ಮಗಳೂಂದ್ರೆ ಅವಳಿಗೆ ಪಂಚಪ್ರಾಣ. ಅದಕ್ಕೆ ಹಾಗಾಡ್ತಾಳೇಂತ ಅಂದ್ಕೊಂಡಿದ್ದೆ... ಒಮ್ಮೆ ಮಗು ಯಾವುದಕ್ಕೊ ಹಟ ಮಾಡಿದಾಗ, 'ನೋಡ್ತಾಯಿರು ಈಗ ಎತ್ತಿ ಕೆಳಗೆ ಬಿಸಾಕಿಬಿಡ್ತೀನಿ...' ಎಂದಳು. ಆ ಗದರಿಕೆಯಲ್ಲಿ ಯಾವ ಭಯದ ಸುಳಿವೂ ಇರಲಿಲ್ಲವೆಂದು